



ಚಿಂತೆಯಿಲ್ಲ ಎಂದೂ, ತಾನೂ ಸಂಪಾದನೆಯ ದಾರಿ ಕಂಡುಕೊಂಡಿರುವುದಾಗಿಯೂ ಹೇಳಿದಾಗ ಸಹಜವಾಗಿಯೇ ಮಾತಾಪಿತೃಗಳ ಚಿಂತೆ ಉಲ್ಬಣಿಸಿತು. ವಿದೇಶದಿಂದ ತಕ್ಷಣಕ್ಕೆ ದೆಹಲಿಗೆ ವಿಮಾನ ಹತ್ತುವ ಸ್ಥಿತಿಯಲ್ಲಿ ಅವರು ಇರಲಿಲ್ಲ. ಪತ್ತೆದಾರಿ ಏಜೆನ್ಸಿಯೊಂದರ ಸಹಾಯ ಬಯಸಿದರು. ಮಗಳಿಗೆ ಒಬ್ಬ ಪ್ರೇಮಿ ಇದ್ದು, ಅವನೇ ಅವಳ ಸಕಲೇಷ್ಟಗಳನ್ನೂ ಪೂರೈಸುತ್ತಿರುವುದರಿಂದ ತನ್ನ ಬ್ಯಾಂಕ್ ಖಾತೆಯ ಹಣವನ್ನು ಅವಳು ಉಪಯೋಗಿಸಿಯೇ ಇಲ್ಲ ಎನ್ನುವುದು ಖಾತರಿಯಾಯಿತು.

## ಸಿಂಗ್ ವರ್ಸಸ್ ಸಿಂಗ್

ಇವೆರಡೂ ಈ ಕಾಲದ ಪ್ರಕರಣಗಳಾದವು. ಎರಡು ದಶಕ ಹಿಂದಕ್ಕೆ ಹೋಗೋಣ. ಸಲ್ವಂತ್ ಸಿಂಗ್ ಎಂಬ ಪಂಜಾಬಿಯೊಬ್ಬ ಸಿಂಗಪುರದಲ್ಲಿ ನೆಲೆಗೊಂಡಿದ್ದ. ಅವನು ಕ್ರೆಡಿಟ್ ಕಾರ್ಡ್ ಹಗರಣದಲ್ಲಿ ಸಿಕ್ಕಿಬಿದ್ದ. ಇನ್ನೇನು ಅವನನ್ನು ಪೊಲೀಸರು ಬಂಧಿಸಬೇಕು ಎನ್ನುವಷ್ಟರಲ್ಲಿ ದೇಶವನ್ನೇ ತೊರೆದ. ಇಂಟರ್‌ಪೋಲ್ ಎಚ್ಚರಿಕೆ, ಸಿಬಿಐ ನೇತೃತ್ವದ ಶೋಧದ ನಂತರವೂ ಸಲ್ವಂತ್ ಸಿಂಗ್‌ನನ್ನು ಪತ್ತೆಹಚ್ಚಲು ಆಗಲೇ ಇಲ್ಲ. ಇನ್ನೊಬ್ಬ ಪತ್ತೆದಾರಿ ಸಿಂಗ್ ಈ ಪ್ರಕರಣವನ್ನು ಭೇದಿಸಲಾರಂಭಿಸಿದರು. ಅವರೇ ಕುಂವರ್

### ಕೆಣಕುವವರೂ ಇದ್ದಾರೆ

ಬೆಂಗಳೂರಿನ ಬಸವೇಶ್ವರನಗರ ಪೊಲೀಸ್ ಠಾಣೆಗೆ ಇತ್ತೀಚೆಗೆ ಮಹಿಳೆಯೊಬ್ಬರು ದೂರು ನೀಡಿದ್ದರು. ತಮ್ಮನ್ನು ಯಾರೋ ಹಿಂಬಾಲಿಸುತ್ತಿದ್ದಾರೆ ಎಂಬ ಅನುಮಾನ ಬಂದದ್ದಕ್ಕೆ ಹೀಗೆ ಅವರು ಠಾಣೆಯ ಮೆಟ್ಟಿಲೇರಿದ್ದು.

ಪೊಲೀಸರು ಪತ್ತೆದಾರಿ ಸಂಸ್ಥೆಯ ಮಾಲೀಕರನ್ನು ಕೂಡ ಕರೆಯಿಸಿ, ಆ ಪ್ರಕರಣದ ಸಂಬಂಧ ವಿಚಾರಣೆ ನಡೆಸಿದ್ದರು. ಆ ಮಹಿಳೆಯನ್ನು ಯಾವ ಪತ್ತೆದಾರನೂ ಬೆನ್ನುಹತ್ತಿರಲಿಲ್ಲ ಎನ್ನುವುದು ವಿಚಾರಣೆಯಿಂದ ಸ್ಪಷ್ಟವಾಯಿತು.

‘ನಾವು ಯಾರಿಗೂ ಕೇಡುಕನ್ನು ಉಂಟುಮಾಡುವುದಿಲ್ಲ. ಗ್ರಾಹಕರ ಅನುಮಾನ ಬಗೆಹರಿಸುವುದಷ್ಟೇ ನಮ್ಮ ಕೆಲಸ. ನಮಗೂ ಪೊಲೀಸರ ಕೈಗೆ ಸಿಗದಂತೆ ಕೆಲಸ ಮಾಡುವ ನೈತಿಕತೆ ಇರುತ್ತದೆ. ಆ ಸೂಕ್ಷ್ಮಗಳಿಲ್ಲದೆ ಈ ವೃತ್ತಿಯಲ್ಲಿ ಏಗುವುದು ಸಾಧ್ಯವಿಲ್ಲ’ ಎಂದು ಹೆಸರು ಹೇಳಲು ಇಚ್ಛಿಸದ ಬೆಂಗಳೂರಿನ ಪತ್ತೆದಾರರೊಬ್ಬರು ಸ್ಪಷ್ಟನೆ ನೀಡಿದರು.